# ಸ್ವಾಮಿ ಭಾಸ್ವರಾನಂದ (೧೯೦೦-೧೯೭೮)

ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ**

ಅನುವಾದ: **ಕುಮಾರಿ ಪಿ. ಉಷಾ**



**ಸ್ವಾ**ಮಿ ಭಾಸ್ವರಾನಂದ(ಬುದ್ಧ ಮಹಾರಾಜ್)ರನ್ನು ನಾನು ೧೯೬೧ರಲ್ಲಿ ಅದ್ವೈತ ಆಶ್ರಮದಲ್ಲಿ ಕಂಡೆ. ಇದೇ ವರ್ಷ ಅವರು ಬೇಲೂರು ಮಠದ ಟ್ರಸ್ಟಿಗಳಾಗಿ, ಸ್ವಾಮಿ ಗಂಭೀರಾನಂದ ಮಹಾರಾಜರನ್ನು ಭೇಟಿಯಾಗಲು ಬಂದಿದ್ದರು. ಅನಂತರ ಅವರನ್ನು ನಾನು ಅನೇಕ ಬಾರಿ ಕಂಡಿದ್ದೇನೆ. ಅವರು ಸದಾ ಆನಂದದಿಂದಿರುತ್ತಿದ್ದ ಸಾತ್ವಿಕ ಸಾಧುಗಳಾಗಿದ್ದರು. ಗೌರವರ್ಣದವರಾಗಿದ್ದ ಅವರು ನಗುವಾಗ, ಬಿಳುಪಾದ ಅವರ ಹಲ್ಲುಗಳು ಸುಂದರವಾಗಿ ತೋರುತ್ತಿದ್ದವು. ರೂಪವಂತರಾದ ಅವರ ಆಂತರ್ಯವೂ ಶುಭ್ರವಾಗಿತ್ತು. ಅತಿ ಸರಳ ಸ್ವಭಾವದ ಅವರಿಗೆ ಯಾವುದೇ ವಿಷಯವನ್ನು ಗೋಪ್ಯವಾಗಿರಿಸಿಕೊಳ್ಳಲು ಸಾಧ್ಯವಿರುತ್ತಿರಲಿಲ್ಲ. ಸಾಧುವೊಬ್ಬರು ಬೇರೆ ಸಾಧುಗಳ ಬಗ್ಗೆ ದೂರು ನೀಡಿದರೆ, ಆ ಸಾಧುಗಳನ್ನು ಕರೆಸಿ, ''ಏಯ್, ಈ ಸಾಧು ನಿನ್ನ ಬಗ್ಗೆ ದೂರು ನೀಡಿದ್ದಾನೆ'' ಎನ್ನುತ್ತಿದ್ದರು. ಇದರಿಂದ ಅಪ್ರಿಯ ವಾತಾವರಣವು ಸೃಷ್ಟಿಯಾಗುತ್ತಿತ್ತು. ಆದ್ದರಿಂದ ಸಾಧುಗಳಾರೂ ಅವರಿಗೆ ದೂರು ನೀಡುತ್ತಿರಲಿಲ್ಲ.

ಸ್ವಾಮಿ ಭಾಸ್ವರಾನಂದರು ೧೯೩೯ರಿಂದ ೧೯೪೫ರ ವರೆಗೆ ಸಿಂಗಾಪುರ ಆಶ್ರಮದ ಅಧ್ಯಕ್ಷರಾಗಿದ್ದರು. 'ಶೋನಾನದಲ್ಲಿ ನೇತಾಜಿ' ಲೇಖನದಲ್ಲಿ ಅವರು ನೇತಾಜಿಯವರಿಗೆ ಸಂಬಂಧಪಟ್ಟ ಅನೇಕ ಸಣ್ಣಪುಟ್ಟ ಸಂಗತಿಗಳನ್ನು ಬರೆದಿರುವರು. ೧೫ ಫೆಬ್ರವರಿ ೧೯೪೨ರಂದು ಜಪಾನ್ ಸಿಂಗಾಪುರವನ್ನು ದಾಖಲು ಮಾಡಿ ಅದಕ್ಕೆ 'ಶೋನಾನ್' ಎಂದು ಹೆಸರಿಟ್ಟರು. ಜಪಾನಿ ಭಾಷೆಯಲ್ಲಿ ಇದಕ್ಕೆ 'ದಕ್ಷಿಣ ಸಾಗರದ ಬೆಳಕು' ಎಂದರ್ಥ. ಒಂದು ದಿನ ಮಹಾರಾಜರು ಹೋಟೆಲ್‌ನಲ್ಲಿ ರಾಸಬಿಹಾರಿ ಬಸುರವರನ್ನು ಭೇಟಿಯಾದಾಗ ಅವರು ಬುದ್ಧ ಮಹಾರಾಜರಿಗೆ, ''ಈಗ ಧರ್ಮವನ್ನು ಬದಿಗಿಟ್ಟು ಸೇವೆಯಲ್ಲಿ ನಿರತರಾಗಿರಿ. ಭಾರತ ಸ್ವಾಧೀನವಾದ ಬಳಿಕ ಅದರ ಬಗ್ಗೆ ಚಿಂತಿಸಿದರಾಯಿತು!'' ಎಂದಿದ್ದರು. ಅದಕ್ಕುತ್ತರವಾಗಿ ಮಹಾರಾಜರು, ''ಹೌದು, ನಾವುಗಳು ಸೇವಾಕಾರ್ಯಕ್ಕೆ ತಯಾರಾಗಿಯೇ ಇದ್ದೇವೆ. ನಮ್ಮಿಂದ ಸಾಧ್ಯವಾದಷ್ಟು ಸೇವೆ ನಾವು ಮಾಡಿಯೇ ಮಾಡುತ್ತೇವೆ'' ಎಂದರು.

೧೯೭೭ರಲ್ಲಿ ನಾನು ಮಹಾರಾಜರನ್ನು ಭೇಟಿಯಾಗಿ ಅವರ ಸಂದರ್ಶನವನ್ನು ದಾಖಲು ಮಾಡಿಕೊಂಡೆ.

**೩.೧೦.೧೯೭೭, ಅಂಬಿಕಾಧಾಮ, ಕಾಶಿ**

**ಮಹಾರಾಜರು:** ''ಒಂದು ದಿನ ವಿಜ್ಞಾನ ಮಹಾರಾಜರು ನನಗೆಂದರು, 'ನೋಡು, ರಾಜಾ ಮಹಾರಾಜರೊಂದಿಗೆ ಮಾತನಾಡುವಾಗ ಚೆನ್ನಾಗಿ ಯೋಚಿಸಿ ಮಾತನಾಡು. ಅವರು ಲಘುವಾಗಿ ಮಾತನಾಡುತ್ತಾರೆ. ನಾನೇನಾದರೂ ಅದೇ ರೀತಿ ಮಾತನಾಡಿದರೆ ಅವರದನ್ನು ಗಂಭೀರವಾಗಿ ಗ್ರಹಿಸಿ, ಮಾತು ನಿಲ್ಲಿಸಿಬಿಡುವರು. ನನಗದರಿಂದ ಅತೀವ ನೋವುಂಟಾಗುತ್ತದೆ. ಅವರಿಗೆ ನನ್ನ ಮೇಲೆ ಅಪಾರ ಪ್ರೀತಿ.'

''ನೋಡು, 'ಮೊದಲು ಸಾಧುಜೀವನವನ್ನು ರೂಪಿಸಿಕೊ' ಎಂದು ಮಹಾರಾಜರು ಹೇಳುತ್ತಿದ್ದರು. ಅನೇಕ ಸಾಧುಗಳು ತಮ್ಮ ವೈಯಕ್ತಿಕ ಸುಖ-ಸೌಲಭ್ಯಗಳಿಗೋಸ್ಕರ ಶ್ರೀಮಂತರ ಹಿಂದೆ ಸುತ್ತುತ್ತಾರೆ. ಇದರಿಂದ ಅವರ ವೈರಾಗ್ಯ ನಷ್ಟವಾಗುತ್ತದೆ. ನಮ್ಮ ಕಾರ್ಯವೆಂದರೆ, ಬಡಜನರ ಉದ್ಧಾರ; ಶ್ರೀಮಂತರು ಈ ಕಾರ್ಯದಲ್ಲಿ ನೆರವಾಗುತ್ತಾರೆ.

''ಮಹಾಪುರುಷ ಮಹಾರಾಜರಿಗೆ ನಾವು ಪ್ರತಿದಿನ ಬೆಳಗ್ಗೆ ಪ್ರಣಾಮ ಮಾಡಲು ಹೋದಾಗ, ಅವರ ಎಲ್ಲರ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿದ್ದರು; ಜಪ-ಧ್ಯಾನಗಳು ಹೇಗೆ ನಡೆಯುತ್ತಿವೆಯೆಂದೂ ಕೇಳುತ್ತಿದ್ದರು. ಒಮ್ಮೆ ಕಾಳೀಪೂಜೆಯ ಸಮಯದಲ್ಲಿ ಡಾ.ಕಾಂಜೀಲಾಲರ ಮಗಳು ಮಠದಲ್ಲಿರಲು ಅನುಮತಿ ಬೇಡಿದಾಗ ಮಹಾಪುರುಷಜಿ, 'ಇಲ್ಲ, ರಾತ್ರಿಯ ಹೊತ್ತು ಮಹಿಳೆಯರನ್ನು ಮಠದಲ್ಲಿರಲು ಬಿಡುವುದಿಲ್ಲ' ಎಂದು ಖಂಡಿತವಾಗಿ ನುಡಿದರು. ಈ ವಿಷಯಗಳಲ್ಲಿ ಠಾಕೂರರ ಶಿಷ್ಯರು ಬಹಳ ಕಠಿಣರಾಗಿದ್ದರು.''

ಬುದ್ಧ ಮಹಾರಾಜರು ಹೇಳಿದರು: ''ನೋಡು, ಜನ್ಮಜನ್ಮಾಂತರದ ಸಂಸ್ಕಾರಗಳು ನಮ್ಮ ಮನಸ್ಸನ್ನು ಮಾಯೆಯೆಡೆಗೆ

ಎಳೆದೊಯ್ಯುತ್ತಿವೆ. ಸ್ತ್ರೀಯರಲ್ಲಿ ಮಾತೃಭಾವವನ್ನು ಬೆಳೆಸಿಕೊಳ್ಳ ಬೇಕೆಂದರೆ ಬಹಳಷ್ಟು ಸಾಧನೆ-ಭಜನೆಗಳನ್ನು ಮಾಡಬೇಕಾಗು ತ್ತದೆ.'' ಬುದ್ಧ ಮಹಾರಾಜರು ಆನಂತರ ಸ್ವಾಮೀಜಿಯವರು ರಚಿಸಿದ 'ಶಿವಸ್ತೋತ್ರಮ್'ನ ಮೂರು ಶ್ಲೋಕಗಳನ್ನು ನನ್ನೆದುರು ಪಠಿಸಿದರು:

**ವಹತಿ ವಿಪುಲವಾತಃ ಪೂರ್ವಸಂಸ್ಕಾರರೂಪಃ**
**ಪ್ರಮಥತಿ ಬಲವೃಂದಂ ಘೂರ್ಣಿತೇವೋರ್ಮಿಮಾಲಾ ।**
**ಪಚಲಿತ ಖಲು ಯುಗ್ಮಂ ಯುಷ್ಮದಸ್ಮತ್ಪ್ರತೀತಂ**
**ಅತಿವಿಕಲಿತರೂಪಂ ನೌಮಿ ಚಿತ್ತಂ ಶಿವಸ್ಥಮ್ ॥**

(ಬಿರುಗಾಳಿ ಬೀಸಿ ಅಲೆಯನ್ನು ಎಬ್ಬಿಸುವಂತೆ ಪೂರ್ವ ಸಂಸ್ಕಾರವೆಂಬ ಮಹಾಬಿರುಗಾಳಿ ಬೀಸಿ 'ನಾನು' 'ನೀನು' ಎಂಬ ಅಲೆಗಳನ್ನು ಉಂಟುಮಾಡಿದೆ. ಶಿವನಲ್ಲಿ ನೆಲೆಸಿರುವ ಅಂತಹ ವಿಕಲಿತರೂಪವಾಗಿದ್ದ ಮನಸ್ಸನ್ನು ನಾನು ನಮಿಸುವೆನು.)

**ಜನಕಜನಿತಭಾವೋ ವೃತ್ತಯಃ ಸಂಸ್ಕೃತಾಶ್ಚ**
**ಅಗಣನಬಹುರೂಪೋ ಯತ್ರ ಏಕೋ ಯಥಾರ್ಥಃ ।**
**ಶಮಿತವಿಕೃತವಾತೇ ಯತ್ರ ನಾಂತರ್ಬಹಿಶ್ಚ**
**ತಮಹಹ ಹರಮೀಡೇ ಚಿತ್ತವೃತ್ತೇನಿರೋಧಮ್ ॥**

(ಎಲ್ಲಿ ಜನಕ-ಜನಿತಭಾವ, ಪರಿಶುದ್ಧವಾದ ವೃತ್ತಿಗಳು ಮತ್ತು ಅಗಣಿತವಾದ ರೂಪಗಳು ಒಂದೇ ಸತ್ಯದಲ್ಲಿ ಏಕವಾಗುವವೋ, ಎಲ್ಲಿ ಒಳಗೆ ಹೊರಗೆ ಎಂಬ ಭಾವ ಕೊನೆಗಾಣುವುದೋ, ಪ್ರವೃತ್ತಿಗಳೆಂಬ ಅಲೆಗಳು ಎಲ್ಲಿ ಶಾಂತವಾಗುವವೊ ಅಂತಹ ಚಿತ್ತವೃತ್ತಿಯನ್ನು ನಿರೋಧಿಸುವ ಹರನನ್ನು ನಾನು ಸ್ತುತಿಸುವೆನು.)

**ಗಲತತಿಮಿರಮಾಲಃ ಶುಭ್ರತೇಜಃಪ್ರಕಾಶಃ**
**ಧವಲಕಮಲಶೋಭಃ ಜ್ಞಾನಪುಂಜಾಟ್ಟಹಾಸಃ ।**
**ಯಮಿಜನಹೃದಿಗಮ್ಯೋ ನಿಷ್ಕಲಂ ಧ್ಯಾಯಮಾನಃ**
**ಪ್ರಣತಮವತು ಮಾಂ ಸಃ ಮಾನಸೋ ರಾಜಹಂಸಃ ॥**

(ತಿಮಿರಮಾಲೆ ಯಾರಲ್ಲಿ ಜಾರಿಹೋಗಿರುವುದೋ, ಶುಭ್ರ ತೇಜಃಪ್ರಕಾಶನಾಗಿ, ಧವಳಕಮಲದಂತೆ ಯಾರು ಶೋಭಿಸುತ್ತಿರುವನೋ, ಯಾರ ಅಟ್ಟಹಾಸವು ಜ್ಞಾನವನ್ನು ಪ್ರಚೋದಿಸುವುದೋ, ಯಾರನ್ನು ನಿರಂತರ ಧ್ಯಾನದಿಂದ ತಮ್ಮ ಹೃದಯಾಂತರಾಳದಲ್ಲಿ ಜ್ಞಾನಿಗಳು ತಿಳಿದುಕೊಂಡಿರುವರೋ, ಅಂತಹ ಮಾನಸ ಸರೋವರದಲ್ಲಿ ವಿಹರಿಸುತ್ತಿರುವ ಪರಮಶಿವನೆಂಬ ರಾಜಹಂಸವು ಪ್ರಣತನಾದ ನನ್ನನ್ನು ರಕ್ಷಿಸಲಿ.)

ಮಹಾರಾಜರೆಂದರು, ''ನಾವು ಮಠದಲ್ಲಿದ್ದಾಗ ಸ್ವಾಮೀಜಿ ಮಂದಿರದ ನಿರ್ಮಾಣದ ಮೇಲ್ವಿಚಾರಣೆಗಾಗಿ ಸ್ವಾಮಿ ವಿಜ್ಞಾನಾನಂದರು ನಡುನಡುವೆ ಅಲಹಾಬಾದಿನಿಂದ ಬರುತ್ತಿದ್ದರು. ಅವರು ಬಹಳ ಗಂಭೀರ ಸ್ವಭಾವದವರು. ಮಹಾರಾಜರು ಅವರನ್ನು 'ಗುಪ್ತ ಬ್ರಹ್ಮಜ್ಞಾನಿ' ಎನ್ನುತ್ತಿದ್ದರು. ಆಗ ಬೇಲೂರು ಮಠದ ಆಫೀಸನಲ್ಲಿ ಕೆಲಸ ಮಾಡುತ್ತಿದ್ದ ನಾನು ಸಮಯ ಸಿಕ್ಕಾಗ ಮಹಾರಾಜರ ಸೇವೆಯನ್ನು ಮಾಡುತ್ತಿದ್ದೆ; ನಾನು ಅವರಿಗಾಗಿ ಭೋಜನವನ್ನು ತೆಗೆದುಕೊಂಡು ಹೋಗುತ್ತಿದ್ದೆ. ಅವರು ಚೆನ್ನಾಗಿ ಊಟ ಮಾಡಬಲ್ಲವರಾಗಿದ್ದರು.

''ರಾಜಾ ಮಹಾರಾಜರಿಂದ ನಾನು ದೀಕ್ಷೆಯನ್ನು ಯಾಚಿಸಿದಾಗ ಅವರು ನನಗೆ ಒಂದು ವರ್ಷ ಗಾಯತ್ರಿ ಮಂತ್ರದ ಜಪ ಮಾಡಲು ಹೇಳುತ್ತ ಜಪಮಾಲೆಯನ್ನು ಕೊಟ್ಟು, 'ನಾನು ಭುವನೇಶ್ವರ ಮಠದಿಂದ ಹಿಂದಿರುಗಿದಾಗ ನಿನಗೆ ದೀಕ್ಷೆ ಕೊಡುತ್ತೇನೆ' ಎಂದರು. ನಂತರ ಮಠಕ್ಕೆ ಹಿಂದಿರುಗಿದಾಗ, 'ನೀನು ಹರಿಪ್ರಸನ್ನನ (ಸ್ವಾಮಿ ವಿಜ್ಞಾನಾನಂದರ) ಸೇವೆಯನ್ನು ಮಾಡಿರುವೆ. ಅವನಿಂದ ದೀಕ್ಷೆಯನ್ನು ಪಡೆದುಕೊ,' ಎಂದರು. ನಾನೆಂದೆ, 'ಇಲ್ಲ ಮಹಾರಾಜ್, ನನಗೆ ನಿಮ್ಮಿಂದಲೇ ಮಂತ್ರದೀಕ್ಷೆಯನ್ನು ಪಡೆಯುವ ಆಸೆ.' 'ಹಾಗಾದರೆ ನೀನು 'ಪೇಶನ್'(ಹರಿಪ್ರಸನ್ನ ಮಹಾರಾಜ್)ನಿಂದ ಶಿಫಾರಸ್ ತೆಗೆದುಕೊಂಡು ಬಾ' ಎನ್ನುತ್ತ ಅವರು ನನ್ನನ್ನು ಮತ್ತೆ ವಿಜ್ಞಾನ್ ಮಹಾರಾಜರ ಬಳಿಗೆ ಕಳುಹಿಸಿದರು. ಹೀಗೆ ಮಹಾರಾಜರು ದೀಕ್ಷೆಯನ್ನು ನೀಡುವ ಮೊದಲು ತುಂಬ ಪರೀಕ್ಷಿಸುತ್ತಿದ್ದರು.

''ದೀಕ್ಷಾನಂತರ ನನಗೆ ಹೇಳಿದರು, 'ನೋಡು ಹೆಚ್ಚು ಉಪದೇಶಗಳನ್ನು ಪಾಲಿಸಬೇಕಾಗಿಲ್ಲ. ಸತ್ಯ ಮತ್ತು ಬ್ರಹ್ಮಚರ್ಯ-ಇವೆರಡನ್ನು ಪಾಲಿಸಿದರೆ ಯಥೇಷ್ಟ.' ''

''ಪೇತಾಪುರಿ ಎಂಬ ಹೆಸರಿನ ಹುಡುಗನೊಬ್ಬ ಬಂದಿದ್ದ. ಮಹಾರಾಜ್ ಅವನಿಗೆ ದೀಕ್ಷೆ ನೀಡಿದ್ದರು; ಅವನನ್ನು ಅವರು ಪ್ರೀತಿಯಿಂದ ನೋಡುತ್ತಿದ್ದರು. ಅವನಿಗೆ ತಪಸ್ಸು ಮಾಡಬೇಕೆಂದು ಬಹಳ ಆಸೆ. ಮಹಾರಾಜರ ಮಹಾಸಮಾಧಿಯ ನಂತರ ನಾನು ಮೂರು ತಿಂಗಳು ಭುವನೇಶ್ವರದಲ್ಲಿದ್ದೆ. ಆಗ ಸ್ವಾಮಿ ಆತ್ಮಾನಂದ ಹಾಗೂ ಅಚಲಾನಂದರು ಅಲ್ಲಿದ್ದರು. ಪೇತಾಪುರಿ ಆಶ್ರಮದಲ್ಲಿ ಊಟಮಾಡಿ ಹೊರಗಡೆ ದೇವಸ್ಥಾನವೊಂದರಲ್ಲಿ ತಪಸ್ಸು ಮಾಡುತ್ತಿದ್ದ. ಕಡೆಗೆ ಅವನು ನಡೆದು ಕಾಶಿಗೆ ಹೋದನು. ಹೆಚ್ಚು ತಪಸ್ಸು ಮಾಡಹೋಗಿ ಅವನ ತಲೆ ಕೆಟ್ಟಿತು. ಕಾಶಿ ಆಶ್ರಮಕ್ಕೆ ಬಂದು ತೊಂದರೆ ಕೊಡಲಾರಂಭಿಸಿದ. ಒಡನೆ ಒಂದು ಕೋಲು ತೆಗೆದುಕೊಂಡು ಬರುತ್ತಿದ್ದ. ಆದರೆ ಸಾಧುಗಳು ಅವನನ್ನು ಶಾಂತಗೊಳಿಸಲು ಪ್ರಯತ್ನಿಸುತ್ತಿದ್ದರು. 'ತಾಯಿ, ನನ್ನನ್ನು ನಿನ್ನ ಪ್ರೀತಿಯಲ್ಲಿ ಹುಚ್ಚನನ್ನಾಗಿಸು ಎಂದು ಇವರೆಲ್ಲ ಹಾಡುತ್ತಾರೆ. ಈಗ ನನಗೆ ಹುಚ್ಚು ಹಿಡಿದಿರುವಾಗ ನನ್ನನ್ನು ಹೊಡೆಯಲು ಬರುತ್ತಾರೆ' ಎನ್ನುತ್ತಿದ್ದ. ಬಲವಂತವಾಗಿ ಧ್ಯಾನಜಪಗಳನ್ನು ಮಾಡಹೊರಟರೆ ಅನೇಕರ ತಲೆ ಕೆಡುತ್ತದೆ.

''ಮಹಾಪುರುಷಜಿ ನನ್ನನ್ನು ತುಂಬ ಪ್ರೀತಿಸುತ್ತಿದ್ದರು. ಒಂದು ದಿನ ಸಾಯಂಕಾಲ ಇಬ್ಬರು ಬ್ರಹ್ಮಚಾರಿಗಳೊಂದಿಗೆ ಬೇಲೂರು ಗ್ರಾಮದ ಭಕ್ತರೊಬ್ಬರ ಮನೆಗೆ ಹೋಗಿದ್ದೆ. ಅವರ

ತೋಟದಲ್ಲಿ ಅನೇಕ ಮಾವಿನ ಮರಗಳಿದ್ದವು. ಅವರು ಮಾವಿನ ಹಣ್ಣು ತಿನ್ನಲು ನಮ್ಮನ್ನು ಆಮಂತ್ರಿಸಿದರು. ಸಂಜೆ ಬಹಳ ಹೊತ್ತಾಯಿತು. ಸ್ವಾಮೀಜಿ ಕೋಣೆಯಲ್ಲಿ ದೀಪ ಉರಿಸುವುದು ನನ್ನ ಕೆಲಸವಾಗಿತ್ತು. ಆದರೆ ಅಂದು ಅವರ ಕೋಣೆಯು ಕತ್ತಲಾಗಿದ್ದರಿಂದ ನಾನು ದೀಪ ಉರಿಸಿಲ್ಲವೆಂಬುದನ್ನು ಮಹಾಪುರುಷಜಿ ತಿಳಿದುಕೊಂಡರು. ಅವರು ಮತ್ತೊಬ್ಬ ಸಾಧುಗಳಿಗೆ ದೀಪವನ್ನು ಹಚ್ಚಲು ಹೇಳಿದ್ದರು. ನಾನು ಮಠಕ್ಕೆ ಹಿಂದಿರುಗಿದಾಗ ಭಾವ ಮಹಾರಾಜರು (ಸ್ವಾಮಿ ರಾಮೇಶ್ವರಾನಂದ) ಹೇಳಿದರು, ''ಹೋಗು, ಇವತ್ತು ನಿನ್ನ ಅದೃಷ್ಟ ಚೆನ್ನಾಗಿಲ್ಲ. ನಿನ್ನನ್ನಿಂದು ಮಠದಿಂದ ಹೊರಹಾಕುತ್ತಾರೆ.'' ನಾನು ನಡುಗುತ್ತ ಮಹಾಪುರುಷಜಿಯವರ ಹತ್ತಿರ ಬಂದಾಗ ಅವರು ಹೇಳಿದರು, ''ನೋಡಪ್ಪ, ನೀನಿನ್ನೂ ಹೊಸಬ. ಠಾಕೂರರ ಕೆಲಸವನ್ನು ನಿರ್ಲಕ್ಷಿಸಬಾರದು. ನೀನಿಂದು ಸ್ವಾಮೀಜಿಯ ಕೋಣೆಯಲ್ಲಿ ದೀಪ ಉರಿಸಲಿಲ್ಲ. ಇದೊಂದು ದೊಡ್ಡ ಅಪರಾಧವೇ. ಇನ್ನೊಮ್ಮೆ ನೀನು ಹೀಗೇನಾದರೂ ಮಾಡಿದರೆ, ನಿನ್ನನ್ನು ಮನೆಗೆ ಕಳುಹಿಸುತ್ತೇವೆ. ಈ ಕೆಲಸಗಳ ಮೂಲಕವೇ ಚಿತ್ತಶುದ್ಧಿ, ಭಕ್ತಿಲಾಭ-ಗಳನ್ನು ಪಡೆಯಲಾಗುವುದು' ಎಂದಷ್ಟೇ ಹೇಳಿದರು.

''ಇನ್ನೊಂದು ಸಲ ನಮ್ಮ ಗ್ರಾಮದ ಒಬ್ಬ ಹುಡುಗ ಮಠಕ್ಕೆ ಬಂದ. ಮಹಾಪುರುಷ ಮಹಾರಾಜರು ಅವನು ಮಠದಲ್ಲಿರಲು ಅನುಮತಿಸಲಿಲ್ಲ. ಭವ ಮಹಾರಾಜರಿಂದ ಈ ವಿಷಯವನ್ನು ತಿಳಿದ ನಾನು, ಬೇಲೂರಿನ 'ರಥತಲಾ'ದಲ್ಲಿದ್ದ ಅವನನ್ನು ಹುಡುಕಿ ರಾತ್ರಿ ೯ ಗಂಟೆಯ ಹೊತ್ತಿಗೆ ಮಠಕ್ಕೆ ಕರೆತಂದು ಅವನ ಊಟ-ವಸತಿಗೆ ವ್ಯವಸ್ಥೆ ಮಾಡಿದೆ. ಮಾರನೆಯ ದಿನ ಮಹಾಪುರುಷಜಿಯವರಿಗೆ ವಿಷಯವನ್ನು ತಿಳಿಸಿದಾಗ ಅವರು ಪ್ರೀತಿಯಿಂದ, ''ಒಳ್ಳೆಯದನ್ನೇ ಮಾಡಿದೆ. ರಾತ್ರಿ ಊಟದ ವ್ಯವಸ್ಥೆ ಮಾಡಿದೆ ತಾನೆ? ಅವನು ಇಲ್ಲಿರುವಷ್ಟು ದಿನವೂ ಅವನನ್ನು ಸ್ವಲ್ಪ ನೋಡಿಕೊ'' ಎಂದರು.

''ಹರಿ ಮಹಾರಾಜರ ದರ್ಶನವನ್ನು ನಾನು ಮಾಡಿಲ್ಲ. ಶರತ್ ಮಹಾರಾಜರನ್ನು ಅನೇಕ ಸಲ ನೋಡಿರುವೆ. ಅವರು ಮಠದ ಟ್ರಸ್ಟಿ ಮೀಟಿಂಗ್‌ಗೆ ಬರುತ್ತಿದ್ದರು. ಮೀಟಿಂಗ್‌ನ ನಂತರ ತುಂಬಾ ಹೊತ್ತು ಕುಳಿತು ಧ್ಯಾನ ಮಾಡುತ್ತಿದ್ದರು. ನಾನಾಗ ಮಿಷನ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದೆ. ಒಮ್ಮೆ 'ಉದ್ಬೋಧನ'ಕ್ಕೆ ಹೋಗಿದ್ದಾಗ ಅವನು ನನಗೊಂದು ದೊಡ್ಡ ಸಂಸ್ಕೃತ ಕೋಶವನ್ನು ಕೊಡುತ್ತ, 'ನೀನಿದ್ದನ್ನು ಮಠಕ್ಕೆ ತೆಗೆದುಕೊಂಡು ಹೋಗಲು ಸಾಧ್ಯವೆ?' ಎಂದು ಕೇಳಿದರು. ನಾನು, 'ಹ್ನುಂ, ಮಹಾರಾಜ್ ಖಂಡಿತವಾಗಿಯೂ ಕೊಂಡೊಯ್ಯುವೆ' ಎಂದೆ.

''ಠಾಕೂರರ ಪಾರ್ಷದರ ಸಂಗಲಾಭವನ್ನು ಪಡೆದು ನನ್ನ ಜೀವನ ಪರಿಪೂರ್ಣವಾಗಿದೆ. ಮಠವನ್ನು ಸೇರಿ ಅದರ ಅಂಗಳವನ್ನು ಗುಡಿಸಿದ್ದೇನೆ, ಆಫೀಸಿನಲ್ಲಿಯೂ ಡಿಸ್ಪೆನ್ಸರಿಯಲ್ಲೂ ಕೆಲಸ ಮಾಡಿದ್ದೇನೆ. ಠಾಕೂರರ ಶಿಷ್ಯರುಗಳ ಸೇವೆಗೈದು ಅತ್ಯಂತ ಆನಂದವನ್ನು ಪಡೆದಿರುವೆ. ಅವರ ಪ್ರೀತಿಯನ್ನು ಮರೆಯುವಂತಿಲ್ಲ.'' ❃

## ಶ್ರೀಮಾತೆಯವರ ಉಪದೇಶಗಳು



❃ ತಪಸ್ಸು ಮಾಡುತ್ತಿದ್ದೀ ಅಂತ ಭಗವಂತನ ಕೃಪೆಯಾಗಬೇಕು ಎಂದೇನೂ ಇಲ್ಲ. ಹಿಂದೆ ಋಷಿಗಳು ತಲೆಕೆಳಗೆ ಕಾಲು ಮೇಲೆ ಮಾಡಿಕೊಂಡು, ಕೆಳಗೆ ಬೆಂಕಿ ಉರಿಯುತ್ತಿರುವಾಗ ಸಾವಿರಾರು ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದರು. ಆದರೆ ಅದರಿಂದ ಕೆಲವರ ಮೇಲೆ ಭಗವಂತನ ಕೃಪೆಯುಂಟಾಗುತ್ತಿತ್ತು, ಕೆಲವರ ಮೇಲೆ ಉಂಟಾಗುತ್ತಿರಲಿಲ್ಲ. ಎಲ್ಲವೂ ಭಗವಂತನ ದಯೆಯನ್ನು ಅವಲಂಬಿಸಿದೆ.

❃ ಶ್ರೀರಾಮಕೃಷ್ಣರ ಕೂದಲು ಕ್ಷುಲ್ಲಕ ವಸ್ತುವೆ ? ಅವರ ದೇಹತ್ಯಾಗವಾದ ನಂತರ ಪ್ರಯಾಗಕ್ಕೆ ಹೋದಾಗ, (ವೃಂದಾವನದಿಂದ ಮರಳಿ ಬರುವಾಗ (೧೮೮೭ರಲ್ಲಿ) ಶ್ರೀಮಾತೆ ಅಯೋಧ್ಯೆ ಹಾಗೂ ಪ್ರಯಾಗದ ಮೂಲಕ ಬಂದಿದ್ದರು) ಅವರ ಕೂದಲನ್ನು ಕೈಯಲ್ಲಿ ಹಿಡಿದು ಈಗ ನೀರಿನಲ್ಲಿ ಅರ್ಪಿಸುತ್ತೇನೆ ಎಂದು ಭಾವಿಸುತ್ತಿದ್ದೆ, ಅಷ್ಟರಲ್ಲಿ ಹಠಾತ್ತನೆ ಒಂದು ಅಲೆ ಬಂದು ನನ್ನ ಕೈಯಲ್ಲಿದ್ದ ಕೂದಲನ್ನು ಸೆಳೆದುಕೊಂಡು ಹೋಗಿ ನೀರಿನಲ್ಲಿ ಒಂದಾಯಿತು. ತೀರ್ಥ ಪವಿತ್ರವಾಗಲು ಅದು ನನ್ನ ಕೈಯಿಂದ ಆ ಕೂದಲನ್ನು ಸೆಳೆದುಕೊಂಡು ಹೋಯಿತು.

**ಶಿಷ್ಯ :** ಅಮ್ಮಾ, ಮಂತ್ರದೀಕ್ಷೆ ನೀಡಿದ ಗುರು ಹಾಗೂ ಸಂನ್ಯಾಸ ನೀಡಿದ ಗುರು ಬೇರೆಬೇರೆಯಾಗಿರುವವರು ಯಾರನ್ನು ಗುರುವೆಂದು ಧ್ಯಾನ ಮಾಡಬೇಕು ?

**ಶ್ರೀಮಾತೆ :** ಮಂತ್ರದೀಕ್ಷೆ ನೀಡಿದ ಗುರುವೇ ಗುರು. ಆ ಮಂತ್ರದಿಂದಲೇ ಕಾಲಕ್ರಮದಲ್ಲಿ ತ್ಯಾಗ, ವೈರಾಗ್ಯ, ಸಂನ್ಯಾಸ ಎಲ್ಲವೂ ಲಭಿಸುವುದು.

❃ ಅಭ್ಯಾಸದ ಶಕ್ತಿ ಎಷ್ಟು ನೋಡು ! ಹೀಗೆಯೇ ಜಪವನ್ನು ಅಭ್ಯಾಸ ಮಾಡುತ್ತ ಮನುಷ್ಯ ಸಿದ್ಧನಾಗುತ್ತಾನೆ. ಜಪಾತ್ ಸಿದ್ಧಿಃ, ಜಪಾತ್ ಸಿದ್ಧಿಃ, ಜಪಾತ್ ಸಿದ್ಧಿಃ!

*('ಶ್ರೀಶಾರದಾದೇವಿ ವಚನವೇದ', ಪು.೩೨೬–೩೫)*